# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 857 |
| ಸದಸ್ಯರ ಹೆಸರು | : | ಶ್ರೀಮತಿ ಎಸ್. ವೀಣಾ ಅಚ್ಚಯ್ಯ |
| ಉತ್ತರಿಸಬೇಕಾದ ದಿನಾಂಕ | : | 11.03.2020 |
| ಉತ್ತರಿಸಬೇಕಾದ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ | Ans |
|---|---|---|---|
| ಅ | ಕೊಡವರ ಕುಲಶಾಸ್ತ್ರೀಯ ಅಧ್ಯಯನ ಮಾಡಿ, ವರದಿ ನೀಡುವಂತೆ ಸರ್ಕಾರ ಆದೇಶಿಸಿದೆಯೇ; (ಇದ್ದಲ್ಲಿ ಆದೇಶದ ಪ್ರತಿ ನೀಡುವುದು) | ಹೌದು. ಆದೇಶದ ಪ್ರತಿ ಲಗತ್ತಿಸಿದೆ. (ಆದೇಶ ಸಂಖ್ಯೆ:ಸಕಇ 229 ಎಸ್‌ಎಡಿ 2016, ದಿನಾಂಕ: 01/12/2016). | Yes. Government Order is enclosed. (No: SWD229 SAD 2016, dated: 01/12/2016). |
| ಆ | ಆದೇಶಿಸಿದ್ದಲ್ಲಿ, ಈ ಕುರಿತ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆಯೇ; | ಕುಲಶಾಸ್ತ್ರೀಯ ಅಧ್ಯಯನ ವರದಿಯು ಸ್ವೀಕೃತವಾಗಿರುವುದಿಲ್ಲ. | Ethnographic Study report is not received. |
| ಇ | ಸಲ್ಲಿಕೆಯಾಗದಿದಲ್ಲಿ, ದೀರ್ಘಾವಧಿ ವಿಳಂಬಕ್ಕೆ ಕಾರಣಗಳೇನು; | ಕರ್ನಾಟಕ ರಾಜ್ಯ ಬುಡಕಟ್ಟುಗಳ ಸಂಶೋಧನಾ ಸಂಸ್ಥೆ, ಮೈಸೂರು ಇವರ ವತಿಯಿಂದ ಅಧ್ಯಯನ ಕಾರ್ಯ ನಡೆಸಲಾಗುತ್ತಿದ್ದು, ಕೊಡಗು ಜಿಲ್ಲೆಯಲ್ಲಿ ಕೆಲವರು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಆದರೆ ತದನಂತರ ಕುಲಶಾಸ್ತ್ರೀಯ ಅಧ್ಯಯನವನ್ನು ಮುಂದುವರೆಸಲಾಗಿದ್ದು, ಪ್ರಸ್ತುತ ಕ್ಷೇತ್ರ ಕಾರ್ಯ ಪೂರ್ಣಗೊಂಡಿದ್ದು, ಕರಡು ವರದಿ ತಯಾರಿಸುವ ಹಂತದಲ್ಲಿದ್ದು, ಸದರಿ ಕರಡು ವರದಿಯನ್ನು ತಜ್ಞರ ಸಮಿತಿಯಿಂದ ಅಭಿಪ್ರಾಯ/ಸಲಹೆ ಪಡೆದು ಅಂತಿಮ ವರದಿಯನ್ನು ಶೀಘ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಗಿದೆ. ವರದಿ ಬಂದ ನಂತರ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದು. | The Ethnographic Study of Kodava community is being carried out by the Karnataka State Tribal Research Institute, Mysuru. However, as some persons of Kodagu District objected for the study, it was temporarily discontinued. The Study has been resumed and field work has been completed. It is at the draft report preparation stage. Tribal Research Institute, Mysore has been instructed to submit the report to government immediately after obtaining the opinion/suggestion from the experts committee. Once the report is received Appropriate action will be taken. |
| ಈ | ಯಾವ ಕಾಲಮಿತಿಯೊಳಗೆ ಕೊಡವರ ಬಹುಕಾಲದ ನ್ಯಾಯಯುತ ಬೇಡಿಕೆಯಾದ ಈ ವರದಿಯನ್ನು ಪೂರ್ಣಗೊಳಿಸಿ, ಮಂಡಿಸಿ, ಜಾರಿಗೊಳಿಸಲಾಗುವುದು? | | |

ಸಕಇ 55 ಎಸ್‌ಎಡಿ 2020

(ಗೋವಿಂದ ಎಂ. ಕಾರಜೋಳ),
ಉಪ ಮುಖ್ಯ ಮಂತ್ರಿಗಳು ಹಾಗೂ ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ ಸಚಿವರು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೊಡಗು ಜಿಲ್ಲೆಯಲ್ಲಿನ ಕೊಡವ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ನಡೆಸುವ ಬಗ್ಗೆ.

*****

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಕಇ 159 ಎಸ್‌ಎಡಿ 2006, ದಿನಾಂಕ: 31-10-2008,

2. ದಿ:02-10-2016 ಮತ್ತು 6-10-2016ರ ಇ-ಮೇಲ್ ಪತ್ರಗಳು

3. ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಇವರ ಪತ್ರ ಸಂಖ್ಯೆ:ಟಿಆರ್‌ಐ/ಮೈ/ಸಂವಿ/ಸಿಆರ್-70/2016-17, ದಿನಾಂಕ:07-10-2016,

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿನ ಸರ್ಕಾರಿ ಆದೇಶ ದಿನಾಂಕ:31-10-2008ರಲ್ಲಿ ಕೊಡವ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕಾನಮಿಕ್ ಚೇಂಜ್, ನಾಗರಬಾವಿ ಬೆಂಗಳೂರು ಇವರಿಗೆ ವಹಿಸಿದ್ದು, ಅವರು ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರಂತೆ ಕ್ರಮ ಸಂಖ್ಯೆ(3)ರಲ್ಲಿನ ದಿನಾಂಕ:07-10-2016ರ ಪತ್ರದಲ್ಲಿ ಕೊಡಗು ಜಿಲ್ಲೆಯ ಕೊಡವ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ಕಾರ್ಯವನ್ನು ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ವತಿಯಿಂದ ಕೈಗೊಳ್ಳಲು ವಿವರವಾದ ಕ್ರಿಯಾ ಯೋಜನೆಯನ್ನು ತಯಾರಿಸಿ ಕುಲಶಾಸ್ತ್ರೀಯ ಅಧ್ಯಯನ ಕಾರ್ಯವನ್ನು ಕೈಗೊಳ್ಳಲು ತಗಲುವ ವೆಚ್ಚ ರೂ. 11.00 ಲಕ್ಷಗಳನ್ನು ಬಿಡುಗಡೆ ಮಾಡಿ ಆದೇಶ ಹೊರಡಿಸುವಂತೆ ಹಾಗೂ ಸದರಿ ವೆಚ್ಚವನ್ನು ಕುಲಶಾಸ್ತ್ರೀಯ ಅಧ್ಯಯನ ಬಾಬ್ತಿನಿಂದ ಉಳಿದಿರುವ ಅನುದಾನದಲ್ಲಿ ಭರಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 229 ಎಸ್‌ಎಡಿ 2016 ಬೆಂಗಳೂರು ದಿನಾಂಕ: 01-12-2016**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕೊಡಗು ಜಿಲ್ಲೆಯ ಕೊಡವ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನವನ್ನು ಈ ಕೆಳಕಂಡ 5 ಅಂಶಗಳನ್ನು ಪರಿಗಣಿಸಿ, ಕುಲಶಾಸ್ತ್ರೀಯ ಅಧ್ಯಯನವನ್ನು ರೂ. 11.00ಲಕ್ಷಗಳ(ಹನ್ನೊಂದು ಲಕ್ಷ ರೂಪಾಯಿಗಳು ಮಾತ್ರ) ವೆಚ್ಚದಲ್ಲಿ ಕೈಗೊಳ್ಳಲು ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನ ಸಂಸ್ಥೆ, ಮೈಸೂರು, ಇವರಿಗೆ ವಹಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಲಾಗಿದೆ.

| | |
|---|---|
| 1) | ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ ಈ ಕೆಳಕಂಡ ಐದು ವಿಷಯಗಳನ್ನು ಪರಿಗಣಿಸುವುದು.<br>1. Indication of Primitive traits<br>2. Distinctive Culture,<br>3. Geographical Isolation<br>4. Shyness of contact with the community at large<br>5. Backwardness |

| | |
|---|---|
| 2) | ಕುಲಶಾಸ್ತ್ರೀಯ ಅಧ್ಯಯನ ಅಂದಾಜು ವೆಚ್ಚವಾದ ರೂ. 11.00 ಲಕ್ಷಗಳನ್ನು ಹೊರತುಪಡಿಸಿ ಸಂಸ್ಥೆಯ ಯಾವುದೇ ವೆಚ್ಚಗಳನ್ನು ಸಮಾಜ ಕಲ್ಯಾಣ ಇಲಾಖೆ ಭರಿಸುವುದಿಲ್ಲ |
| 3) | ಕೊಡಗು ಜಿಲ್ಲೆಯ ಕೊಡವ ಸಮುದಾಯದವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿಸಬಹುದೇ ಎಂಬ ಕುರಿತಂತೆ ವರದಿಯಲ್ಲಿ ಸ್ಪಷ್ಟ ಅಭಿಪ್ರಾಯ ನಮೂದಿಸತಕ್ಕದ್ದು. |
| 4) | ಅಧ್ಯಯನವನ್ನು ಮೂರು ತಿಂಗಳಲ್ಲಿ ಪೂರ್ಣಗೊಳಿಸಿ ವರದಿ ಸಲ್ಲಿಸತಕ್ಕದ್ದು. |
| 5) | ಅಧ್ಯಯನ ವರದಿಯನ್ನು ಕನ್ನಡ ಭಾಷೆ ಹಾಗೂ ಆಂಗ್ಲ ಭಾಷೆ ಇವುಗಳಲ್ಲಿ ತಯಾರಿಸಿ ತಲಾ ಐದು ಪ್ರತಿಗಳಲ್ಲಿ ಒದಗಿಸತಕ್ಕದ್ದು. |

ಈ ಸಂಬಂಧದ ವೆಚ್ಚವನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆಗೆ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಗಿರಿಜನ ಉಪಯೋಜನೆಯಡಿ ಕ್ರೋಢೀಕೃತ ಲೆಕ್ಕಶೀರ್ಷಿಕೆ: 2225-02-283-0-02(ಯೋಜನೆ)ರ ಅಡಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಸರ್ಕಾರದ ಆದೇಶ ಸಂಖ್ಯೆ:ಎಫ್ ಡಿ 03 ಟಿಎಫ್‌ಪಿ 2016 ದಿ:02-04-2016ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ವನಿತ)
ಸರ್ಕಾರದ ಅಧೀನ ಕಾರ್ಯದರ್ಶಿ-2(ಪ್ರ)
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-
1) ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕಪರಿಶೋಧನೆ-1 ಮತ್ತು ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2) ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3) ನಿರ್ದೇಶಕರು, ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ, ಮೈಸೂರು,
4) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಶಾಖೆ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
6) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕೃಷಿ ಭವನ, ಬೆಂಗಳೂರು,
7) ಜಿಲ್ಲಾ ಖಜಾನಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.
8) ಶಾಖಾ ರಕ್ಷ ಕಡತ.
9) ಹೆಚ್ಚುವರಿ ಪ್ರತಿ-03.